
# ಅಬ್ಯಾನೆ

## ಆಧುನಿಕ ಇರಾನ್‌ನ ಪ್ರಾಚೀನ ಗ್ರಾಮ



ಬುಡಕಟ್ಟು ಜನರ ನೆಲೆಯಾದ ಅಬ್ಯಾನೆ ಇರಾನ್‌ನ ಪುರಾತನ ಗ್ರಾಮ. ಯುನೆಸ್ಕೋದ ವಿಶ್ವಪಾರಂಪರಿಕ ಸ್ಥಳಗಳ ಪಟ್ಟಿಗೆ ಸೇರುವ ತವಕದಲ್ಲಿರುವ ಅಬ್ಯಾನೆ, ತನ್ನ ಪ್ರಾಕೃತಿಕ ಅನನ್ಯತೆಯಿಂದ ಪ್ರವಾಸಿಗರನ್ನು ಸೆಳೆಯುತ್ತದೆ.

■ ಡಾ. ಡಿ.ವಿ. ಗುರುಪ್ರಸಾದ್

ಇರಾನ್‌ನ ಮಧ್ಯಭಾಗದಲ್ಲಿ ಇರುವ ಇಸ್ಫಾಹನ್ ನಗರದಿಂದ ಸುಮಾರು 200 ಕಿ.ಮೀ. ದೂರದಲ್ಲಿರುವ ಕಷನ್‌ಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಬಳಿ 'ಅಬ್ಯಾನೆ ಹಳ್ಳಿಗೆ ಹೋಗುವ ದಾರಿ' ಎಂದು ಬರೆದಿದ್ದ ಫಲಕವನ್ನು ಕಂಡು ನಮ್ಮ ಗೈಡ್‌ನನ್ನು ಕೇಳಿದೆ – 'ಏನಿದು ಈ ಹಳ್ಳಿ?'.

'ಇಲ್ಲಿಂದ ಸುಮಾರು 25 ಕಿ.ಮೀ. ದೂರದಲ್ಲಿ ಕಾರ್ಕಸ್ ಪರ್ವತ ಶ್ರೇಣಿಯಲ್ಲಿ, ಏಳನೇ ಶತಮಾನದಲ್ಲಿ ನಿರ್ಮಾಣವಾದ ಹಳ್ಳಿಯದು. ಈ ಹಾದಿಯಲ್ಲಿ ಬರುವ ಎಲ್ಲ ಪ್ರಯಾಣಿಕರೂ ಅಲ್ಲಿಗೆ ಹೋಗುತ್ತಾರೆ. ನಾವೂ ಹೋಗೋಣವೇ?' ಎಂದ.

ಕುತೂಹಲ ತಡೆಯಲಾರದೆ 'ಸರಿ' ಎಂದೆ. ಹೆದ್ದಾರಿಯನ್ನು ಬಿಟ್ಟು ಸಣ್ಣ ರಸ್ತೆಯಲ್ಲಿ ಹೊರಟೆವು. ಸುತ್ತಲೂ ನಯನಮನೋಹರವಾದ ಬೆಟ್ಟಗುಡ್ಡಗಳು. ಹಸಿರು ವನ ಶ್ರೇಣಿಗಳು ಹಾಗೂ ಝುಳುಝುಳು ಹರಿಯುವ ನೀರಿನ ಝರಿಗಳು. ಹೀಗೆಯೇ ಮುಂದೆ ಹೋದಾಗ ಅಬ್ಯಾನೆ ಹಳ್ಳಿಯ ಚೆಕ್‌ಪೋಸ್ಟ್ ತಲುಪಿದೆವು.

### ಕೆಂಪಾದವೋ ಎಲ್ಲ ಕೆಂಪಾದವೋ...

ಅಬ್ಯಾನೆ ಪ್ರವೇಶಿಸಲು ಪ್ರವೇಶ ಶುಲ್ಕ ಕೊಟ್ಟು ಸುಮಾರು ಎರಡು ಕಿ.ಮೀ. ಮುಂದೆ ಹೋದಾಗ ರಸ್ತೆಯ ಪಕ್ಕದಲ್ಲಿಯೇ ಒಂದು ಹಳ್ಳಿ ಕಾಣಿಸಿತು. ಬೆಟ್ಟಗಳ ನಡುವೆ ಕಟ್ಟಲಾಗಿರುವ ಈ ಹಳ್ಳಿಯ ಎಲ್ಲ ಮನೆಗಳೂ ಕೆಂಪು ಬಣ್ಣದವು. ಬೆಟ್ಟದ ಬಣ್ಣವೂ ನಸು ಕೆಂಪಾಗಿರುವುದರಿಂದ ದೂರದಿಂದಲೇ ಈ ಗ್ರಾಮವು ಆಕರ್ಷಕವಾಗಿ ಕಾಣುತ್ತದೆ.

'ಏಳನೇ ಶತಮಾನದಲ್ಲಿ ಪಾರ್ಸಿಗಳು, ಅಂದರೆ ಜೋರಾಷ್ಟ್ರೀಯನ್ ಧರ್ಮದವರು ಇದನ್ನು ಸ್ಥಾಪಿಸಿದರು. ಆ ಸಮಯದಲ್ಲಿ ನಮ್ಮ ದೇಶದಲ್ಲಿ ಇಸ್ಲಾಂ ಪ್ರಭಾವ ಹೆಚ್ಚಾಗಿತ್ತು. ಪ್ರಜೆಗಳನ್ನು ಆ ಧರ್ಮಕ್ಕೆ ಪರಿವರ್ತನೆ ಮಾಡತೊಡಗಿದಾಗ ಹೆದರಿದ ಜೋರಾಷ್ಟ್ರೀಯನ್ ಧರ್ಮೀಯರು ತಾವಿದ್ದ ಜಾಗದಿಂದ ಓಡಿಹೋಗಿ ದೂರದ ಬೆಟ್ಟಗುಡ್ಡಗಳಲ್ಲಿ ನೆಲೆಸಲಾರಂಭಿಸಿದರು. ಈ ರೀತಿ ಸ್ಥಾಪಿತವಾದ ಗ್ರಾಮಗಳಲ್ಲಿ ಅಬ್ಯಾನೆಯೂ ಒಂದು. ಈಗ ಉಳಿದಿರುವ ಇಂತಹ ಕೆಲವು ಗ್ರಾಮಗಳಲ್ಲಿ ಇದೂ ಒಂದು. ಇಲ್ಲಿನ ಮನೆಗಳನ್ನು ಹಾಗೂ ಜನರನ್ನು ನೋಡಿದರೆ ಈ ಗ್ರಾಮದ ಮಹತ್ವ ತಿಳಿಯುತ್ತದೆ' ಎಂದ ನಮ್ಮ ಮಾರ್ಗದರ್ಶಿ.

ಹಳ್ಳಿಯ ಹೊರವಲಯದ ಪಾರ್ಕಿಂಗ್‌ನಲ್ಲಿ ಕಾರು ನಿಲ್ಲಿಸಿ ನಡೆಯುತ್ತಾ ಅಬ್ಯಾನೆ ಪ್ರವೇಶಿಸಿದೆವು. ನಮ್ಮ ಮಸೂರಿ, ನೈನಿತಾಲ್‌ಗೆ ಹೋದ ಹಾಗೆಯೇ ಭಾಸವಾಯಿತು. ಸಣ್ಣದಾದ ಹಾಗೂ ಕಡಿದಾದ ರಸ್ತೆಗಳು. ರಸ್ತೆಯ ಎರಡೂ ಬದಿಗಳಲ್ಲಿ ಮಣ್ಣಿನ ಮನೆಗಳನ್ನು ಕಂಡೆವು. ಪ್ರತಿಯೊಂದು ಮನೆಯನ್ನೂ ಸ್ಥಳೀಯವಾಗಿ ಸಿಗುವ ಜೇಡಿಮಣ್ಣು ಹಾಗೂ ಮರದಿಂದ ಪುರಾತನ ಕಾಲದ ವಿನ್ಯಾಸ ಶೈಲಿಯಲ್ಲಿ ಕಟ್ಟಲಾಗಿದೆ. ಮನೆಗಳಿಗೆ ದೊಡ್ಡದಾದ ಮರದ ಹೆಬ್ಬಾಗಿಲುಗಳನ್ನು ಅಳವಡಿಸಿದ್ದು, ಪ್ರತಿಯೊಂದು ಬಾಗಿಲಿನ ಮೇಲೆಯೂ ಎರಡು ಬೇರೆ ಬೇರೆ ವಿನ್ಯಾಸದ ಕಬ್ಬಿಣದ ಬಡಿಯುವ ಗೂಟಗಳಿವೆ. ಗಂಡಸರು ಬಂದಾಗ ಗಂಡಸರಿಗೆ ಮೀಸಲಾದ ಗೂಟವನ್ನು ಬಡಿಯಬೇಕು. ಹೆಂಗಸರು ತಮಗೆ ಮೀಸಲಾದ ಗೂಟವನ್ನು ಬಡಿಯಬೇಕು. ಬಡಿಯುವ ಶೈಲಿಯಲ್ಲಿ ತಮ್ಮ ಮನೆಗೆ ಬಂದವರು ಯಾರು ಎಂದು ಒಳಗಿರುವವರು ತಿಳಿಯಬಲ್ಲರಂತೆ.




ಅಬ್ಯಾನೆಯ ಹಿರಿ ಜೀವಗಳು

ಪ್ರತಿಯೊಂದು ಮನೆಯ ಮೇಲ್ಭಾಗದಲ್ಲಿ ಎರಡು ಕಿಟಕಿಗಳಿವೆ. ಕೆಲವು ಮನೆಗಳಿಗೆ ಮರದ ಬಾಲ್ಕನಿಗಳನ್ನು ಮಾಡಲಾಗಿದೆ. ಇಲ್ಲಿಯ ವಿಶೇಷ ಏನೆಂದರೆ, ಒಂದು ಮನೆಯ ತಾರಸಿಯೇ ಇನ್ನೊಂದು ಮನೆಯ ನೆಲದ ಭಾಗವಾಗುತ್ತದೆ. ಹೀಗಾಗಿ ಒಂದರ ಮೇಲೊಂದು ಮನೆಯನ್ನು ಕಟ್ಟಲಾಗಿದೆಯೇನೋ ಎಂದು ನೋಡುಗರಿಗೆ ಭಾಸವಾಗುತ್ತದೆ.

### ಹಿರಿಯರ ಊರು!

ಅರ್ಧಕ್ಕರ್ಧ ಮನೆಗಳು ಕೆಳಗೆ ಬಿದ್ದುಹೋಗಿದ್ದವು. ಉಳಿದ ಕೆಲವಕ್ಕೆ ರಿಪೇರಿ ಮಾಡಲಾಗಿತ್ತು. ಈ ಊರಿನಲ್ಲಿ ಎಷ್ಟು ಮನೆಗಳಿವೆ ಎಂದು ಕೇಳಿದಾಗ, 'ಮೊದಲಿಗೆ ಸುಮಾರು ಐನೂರು ಇದ್ದಿರಬಹುದು. ಈಗ ಸುಮಾರು ಮುನ್ನೂರು ಇರಬಹುದು' ಎನ್ನುವ ಉತ್ತರ ದೊರೆಯಿತು. 'ಇಲ್ಲಿನ ಜನರು ತಮ್ಮ ಪುರಾತನ ಸಂಪ್ರದಾಯಗಳನ್ನು ಇಂದಿಗೂ ಆಚರಿಸುತ್ತಾರೆ' ಎಂದ ನಮ್ಮ ಗೈಡ್.